**ಕರ್ನಾಟಕ ಸರ್ಕಾರ**

ಸಂ: ಜಸಂಇ 19 ಎಂಟಿಬಿ 2024

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 13.01.2025

ಇವರಿಂದ :

ಸರ್ಕಾರದ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ,
ವಿಕಾಸಸೌಧ, ಬೆಂಗಳೂರು-560 001.

8938
15 JAN 2025

ಇವರಿಗೆ :

1. ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು.
5. ಆಯುಕ್ತರು, ಭೂಸ್ವಾಧೀನ, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ, ನವನಗರ, ಬಾಗಲಕೋಟೆ.
6. ಮುಖ್ಯ ಇಂಜಿನಿಯರ್, ಜಲಸಂಪನ್ಮೂಲ ಇಲಾಖೆ, ಬೆಂಗಳೂರು.
7. ನಿರ್ದೇಶಕರು, ಕಾಡಾ ನಿರ್ದೇಶನಾಲಯ, ಬೆಂಗಳೂರು.
8. ಮುಖ್ಯ ಇಂಜಿನಿಯರ್, AC-IWRM, ಬೆಂಗಳೂರು.
9. ಮುಖ್ಯ ಇಂಜಿನಿಯರ್, ಅಣೆಕಟ್ಟು ಸುರಕ್ಷತಾ ಸಂಸ್ಥೆ, ಬೆಂಗಳೂರು.
10. ನಿರ್ದೇಶಕರು, ಕೆ.ಇ.ಆರ್.ಎಸ್, ಕೆ.ಆರ್.ಸಾಗರ.
11. ನಿರ್ದೇಶಕರು, ವಾಲ್ಮಿ, ಧಾರವಾಡ.

ಮಾನ್ಯರೆ,

ವಿಷಯ: ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ರಲ್ಲಿನ ಟೆಂಡರ್‌ಗಳಲ್ಲಿ ಕಾಂಟ್ರ್ಯಾಕ್ಟ್ ಮ್ಯಾನೇಜ್‌ಮೆಂಟ್ ಮಾಡ್ಯೂಲ್ (Contract Management Module) ಅನ್ನು ಅನುಸರಿಸುವ ಕುರಿತು.

ಉಲ್ಲೇಖ:
1. ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ:ಆಇ 758 ವೆಚ್ಚ-12/2023 ದಿನಾಂಕ:09.07.2024.
2. ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ:ಆಇ 355 ವೆಚ್ಚ-12/2024 ದಿನಾಂಕ:01.08.2024.
3. ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ:ಆಇ 355 ವೆಚ್ಚ-12/2024 ದಿನಾಂಕ:02.09.2024.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಆರ್ಥಿಕ ಇಲಾಖೆಯ ಅಧಿಸೂಚನೆಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ರ ಕಲಂ 2(ಡಿ)ರಡಿ ವ್ಯಾಖ್ಯಾನಿಸಲಾದ ಎಲ್ಲಾ ಸಂಗ್ರಹಣಾ ಪ್ರಾಧಿಕಾರಗಳ ಸಂಬಂಧದಲ್ಲಿ ಕೈಗೊಳ್ಳುವ ಎಲ್ಲಾ ಸಂಗ್ರಹಣೆಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್‌ರಲ್ಲಿನ ಟೆಂಡರ್‌ಗಳಲ್ಲಿ Contract Management Moduleನ ಅನ್ವಯಿಕೆಯನ್ನು ದಿನಾಂಕ:01.08.2024ರಿಂದ ಜಾರಿಗೆ ಬರುವಂತೆ ನಿರ್ದಿಷ್ಟಪಡಿಸಲಾಗಿದೆ.

ಈಗಾಗಲೇ ಪ್ರಗತಿಯಲ್ಲಿರುವ ಕಾಮಗಾರಿ ಟೆಂಡರ್‌ಗಳ ವಿವರಗಳನ್ನು (ಕರ್ನಾಟಕ ಸಾರ್ವಜನಿಕ ಸಂಗ್ರಹಣಾ portal ನ ಹಳೆಯ ಹಾಗೂ ಹೊಸ ಆವೃತ್ತಿಗಳಲ್ಲಿ ಪ್ರಕಟಿಸಿರುವ) Contract Management Module ನಲ್ಲಿ ಅಳವಡಿಸಲು ಎಲ್ಲಾ ಸಂಗ್ರಹಣಾ ಪ್ರಾಧಿಕಾರಗಳಿಗೆ lateral entry of contract ಅವಕಾಶ ಸಹಾ ಕಲ್ಪಿಸಲಾಗಿದೆ.

ಮುಂದುವರೆದು, ಆರ್ಥಿಕ ಇಲಾಖೆಯ ಉಲ್ಲೇಖ (2)ರ ಸುತ್ತೋಲೆಯಲ್ಲಿ, ಎಲ್ಲಾ ಸಂಗ್ರಹಣಾ ಪ್ರಾಧಿಕಾರಗಳು ಕಡ್ಡಾಯವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್‌ನಲ್ಲಿ Letter of Intent (LoI) ನೀಡುವಂತೆ ಹಾಗೂ ತಂತ್ರಾಂಶದಲ್ಲಿ ನೀಡಲಾದ LoI ಪ್ರತಿಯನ್ನು ದಿನಾಂಕ:01.08.2024ರಿಂದ ಹಣಸೆಳೆಯುವ ಮತ್ತು ಬಟವಾಡೆ ಅಧಿಕಾರಿಗಳು ಖಜಾನೆಗಳಲ್ಲಿ ಪಾವತಿಗಾಗಿ ಸಲ್ಲಿಸುವ ಬಿಲ್ಲುಗಳಿಗೆ ಅಡಕಗೊಳಿಸಲು ಸೂಚಿಸಲಾಗಿರುತ್ತದೆ.

ಆರ್ಥಿಕ ಇಲಾಖೆಯ ಉಲ್ಲೇಖ (3)ರ ಸುತ್ತೋಲೆಯಲ್ಲಿ ಖಜಾನೆಯಲ್ಲಿ ಬಿಲ್ಲು ಪಾವತಿಸದ ನಿಗಮ, ಮಂಡಳಿ, ಸಂಸ್ಥೆಗಳ ಪ್ರಕರಣಗಳಲ್ಲಿ ಆಯಾ ನಿಗಮ, ಮಂಡಳಿ, ಸಂಸ್ಥೆಗಳಲ್ಲಿನ ಬಿಲ್ಲು ಪಾವತಿ ಮಾಡಲು ಪ್ರಾಧಿಕಾರ ಹೊಂದಿರುವ ಮುಖ್ಯ ಲೆಕ್ಕಾಧಿಕಾರಿಗಳು/ಹಣಕಾಸು ಸಲಹೆಗಾರರು ಬಿಲ್ಲು ಪಾವತಿ ಮಾಡಲು KPPP ತಂತ್ರಾಂಶದಲ್ಲಿ ಸೃಜಿಸಲಾದ LoI ಅನ್ನು ಬಿಲ್ಲಿನೊಂದಿಗೆ ಅಡಕಗೊಳಿಸಿರುವುದನ್ನು ಪರಿಶೀಲಿಸಿ, ಪಾವತಿ ಮಾಡುವುದನ್ನು ಕಡ್ಡಾಯಗೊಳಿಸಲಾಗಿದೆ. ಅಲ್ಲದೆ, ಪ್ರಸ್ತಾಪಿತ LoI ಅನ್ನು ಅಡಕಗೊಳಿಸದೆ ಪಾವತಿ ಮಾಡುವ ಬಿಲ್ಲುಗಳಿಗೆ ಸಂಬಂಧಪಟ್ಟ ಮುಖ್ಯ ಲೆಕ್ಕಾಧಿಕಾರಿಗಳು/ಹಣಕಾಸು ಸಲಹೆಗಾರರನ್ನು ವೈಯಕ್ತಿಕವಾಗಿ ಜವಾಬ್ದಾರರನ್ನಾಗಿ ಪರಿಗಣಿಸಿ ಶಿಸ್ತು ಕ್ರಮ ಕೈಗೊಳ್ಳಲು ತಿಳಿಸಲಾಗಿದೆ.

ಮೇಲ್ಕಂಡ ಅಧಿಸೂಚನೆ/ಸುತ್ತೋಲೆಗಳನ್ವಯ ಇಲಾಖಾವಾರು Contract Management Module ನಲ್ಲಿ ಸಾಧಿಸಿರುವ ಪ್ರಗತಿಯ ಕುರಿತು ಸರ್ಕಾರದ ಮಟ್ಟದ ಕೆಡಿಪಿ ಸಭೆಗಳಲ್ಲಿ ಪರಿಶೀಲಿಸಲಾಗುತ್ತಿದೆ. ಇ-ಆಡಳಿತ ಇಲಾಖೆಯಿಂದ ಸ್ವೀಕೃತವಾಗಿರುವ Contract Management Module ನ ಪ್ರಗತಿಯ ವಿವರಗಳನ್ನು (ಪ್ರತಿ ಲಗತ್ತಿಸಿದೆ) ಪರಿಶೀಲಿಸಲಾಗಿ, ಜಲ ಸಂಪನ್ಮೂಲ ಇಲಾಖೆಯಡಿಯಲ್ಲಿನ ಸಂಗ್ರಹಣಾ ಪ್ರಾಧಿಕಾರಗಳು KPPP ತಂತ್ರಾಂಶದಲ್ಲಿ LoI ನೀಡುವುದು ಬಾಕಿ ಇರುವುದು ಹಾಗೂ ಸಂಗ್ರಹಣೆಗಳನ್ನು Contract Management Module ನಲ್ಲಿ ಅಳವಡಿಸದಿರುವುದನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆ.

ಪ್ರಸ್ತುತ, ಜಲ ಸಂಪನ್ಮೂಲ ಇಲಾಖೆಯಡಿ ಖಜಾನೆಯಿಂದ ನಿಗಮಗಳಿಗೆ ಹಣಬಿಡುಗಡೆಗೊಳಿಸಿ, ನಿಗಮಗಳ Bank ಖಾತೆಗಳಿಂದ ಗುತ್ತಿಗೆದಾರರ ಬಿಲ್ಲುಗಳನ್ನು ಪಾವತಿಸಲಾಗುತ್ತಿದೆ. ಸದರಿ ಕಾರ್ಯವಿಧಾನವನ್ನು ಪುನರ್‌ಪರಿಶೀಲಿಸಿ, ಎಲ್ಲಾ ಗುತ್ತಿಗೆ ಕಾಮಗಾರಿಗಳ ಬಿಲ್ ಪಾವತಿಯನ್ನು Contract Management Module ಅಳವಡಿಕೆಯೊಂದಿಗೆ ಖಜಾನೆಯ ಮೂಲಕ ಮಾಡಲು ಆರ್ಥಿಕ ಇಲಾಖೆಯು ಯೋಜಿಸುತ್ತಿದೆ.

ಈ ಹಿನ್ನಲೆಯಲ್ಲಿ, ಸದರಿ ವಿಷಯವನ್ನು ಅತೀ ಪ್ರಾಮುಖ್ಯ ವಿಷಯವೆಂದು ಪರಿಗಣಿಸಿ, ವಿಳಂಬಕ್ಕೆ ಆಸ್ಪದ ನೀಡದೇ, ತಮ್ಮ ವ್ಯಾಪ್ತಿಯ ಎಲ್ಲಾ ಹೊಸ ಹಾಗೂ ಪ್ರಗತಿಯಲ್ಲಿರುವ ಕಾಮಗಾರಿಗಳ ಟೆಂಡರ್‌ಗಳ ಕಡ್ಡಾಯವಾಗಿ Contract Management Module ನಲ್ಲಿ ನಿರ್ವಹಿಸುವಂತೆ ಕೋರಿದೆ. ಸದರಿ ವಿಷಯವಾಗಿ ನಿಗಮ/ವಲಯಗಳ ಹಂತದಲ್ಲಿ ಪ್ರಗತಿ ಪರಿಶೀಲನೆ ನಡೆಸಿ, ಪ್ರಗತಿ ವಿವರಗಳನ್ನು ಪ್ರತಿ ಮಾಹೆಯ 5ನೇ ದಿನದೊಳಗಾಗಿ ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಿದೆ.

ತಮ್ಮ ವಿಶ್ವಾಸಿ,

ಅಡಕ: ಉಲ್ಲೇಖಿತ ಅಧಿಸೂಚನೆ/
ಸುತ್ತೋಲೆಗಳ ಪ್ರತಿ

(ಕೃಷ್ಣಮೂರ್ತಿ ಬಿ. ಕುಲಕರ್ಣಿ.)
ಸರ್ಕಾರದ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ.

ಪ್ರತಿ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ:

1. ಮುಖ್ಯ ಇಂಜಿನಿಯರ್, ಕನೀನಿನಿ, ನೀರಾವರಿ ಯೋಜನೆಗಳ ವಲಯ, ಕಲಬುರಗಿ.
2. ಮುಖ್ಯ ಇಂಜಿನಿಯರ್, ಕನೀನಿನಿ, ನೀರಾವರಿ ಕೇಂದ್ರ ವಲಯ, ಮುನಿರಾಬಾದ್.
3. ಮುಖ್ಯ ಇಂಜಿನಿಯರ್, ಕನೀನಿನಿ, ಮಲಪ್ರಭಾ ಯೋಜನಾ ವಲಯ, ಧಾರವಾಡ.
4. ಮುಖ್ಯ ಇಂಜಿನಿಯರ್, ಕನೀನಿನಿ, ನೀರಾವರಿ ಉತ್ತರ ವಲಯ, ಬೆಳಗಾವಿ.